5.20 ಪಿ.ಎಂ

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಕೈಯಲ್ಲಿ ನಿಲ್ಲಿಸುವುದಕ್ಕೆ ಆಗುತ್ತದೋ ಇಲ್ಲವೋ ಎಂಬುದನ್ನು ಹೇಳಿ.

ಶ್ರೀ ಸಿದ್ದರಾಮಯ್ಯ : ಒಂದಂಕಿ ಲಾಟರಿ ಕ್ರಮವನ್ನು ನಿಲ್ಲಿಸುವುದಕ್ಕೆ ನಾವು ಎಲ್ಲಾ ಕ್ರಮ ಕೈಗೊಳ್ಳುತ್ತೇವೆ.

ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿ ಸೀಟು ವಿತರಣೆಯಲ್ಲಿರುವ ತಾರತಮ್ಯ

+ ಶ್ರೀ ವೈದ್ಯನಾಥ್ ಪಾಟೀಲ್ (ಚಿಂಚೋಳಿ) : ಈಗ ನಾಳೆಯಿಂದ ಮೆಡಿಕಲ್ ಮತ್ತು ಇಂಜಿನಿಯರಿಂಗ್‌ಗಾಗಿ ಅಡ್ಮಿಷನ್ ಪ್ರಾರಂಭವಾಗುತ್ತಿದೆ. ಎರಡು ವರ್ಷಗಳ ಹಿಂದೆ ನಾನು ಮಂತ್ರಿಮಂಡಲದಲ್ಲಿ ಇದ್ದಾಗ, ಬಾಂಬೆಗೆ ಹೋಗಿದ್ದಾಗ ಮಹಾರಾಷ್ಟ್ರದಲ್ಲಿ ಕೆಲವು ಹಿಂದುಳಿದ ಪ್ರದೇಶಗಳಿಗೆ ಪ್ರೊಫೆಷನಲ್ ಕಾಲೇಜ್‌ಗಳಲ್ಲಿ ರಿಸರ್ವೇಷನ್ ನೀಡುತ್ತಿದ್ದಾರೆ. ಮತ್ತು ಸರ್ಕಾರಿ ನೌಕರರಿಗೂ ಸಹ ಒಂದು ರಿಸರ್ವೇಷನ್ ಕೂಡತಕ್ಕೆ ವ್ಯವಸ್ಥೆ ಇದೆಯೆಂದು ನನಗೆ ತಿಳಿದುಬಂತು. ಅದನ್ನು ಸ್ಪಡಿ ಮಾಡಿ ಆಗಿನ ಮುಖ್ಯಮಂತ್ರಿಗಳಾಗಿದ್ದ ದೇವೇಗೌಡರವರಿಗೆ ಒಂದು ಮಿನಿಟ್‌ನ್ನು ಕಳುಹಿಸಿದ್ದೆ. ಅವರು ಅಂಥದ್ದೇ ವ್ಯವಸ್ಥೆಯನ್ನು ಇಲ್ಲಿ ಸಹ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟರು. ಮುಂದಿನ ವರ್ಷ ಅವರು ಪ್ರಧಾನಮಂತ್ರಿಗಳಾಗಿ ಹೋದರು, ಮತ್ತೆ ಜೆ.ಹೆಚ್. ಪಟೇಲ್‌ರವರು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿ ಬಂದರು. ಹೋದ ವರ್ಷ ನಾನು ಅವರಿಗೆ ಒಂದು ಪತ್ರವನ್ನು ಬರೆದೆ, ಆದರೆ ಏನೂ ಆಗಲಿಲ್ಲ. ಈ ಸಲ ಅವರನ್ನು ವೈಯಕ್ತಿಕವಾಗಿ ಭೇಟಿ ಮಾಡಿ, ಅವರಿಗೆ ನನ್ನ ಬೇಡಿಕೆಯ ವಿಷಯವನ್ನು ತಿಳಿಸಿ, ಇದು ಎಲ್ಲಾ ರಾಜ್ಯಗಳಲ್ಲೂ ಇದೆ, ನಮ್ಮಲ್ಲೂ ಸಹ ಮಾಡಬೇಕೆಂದು ಹೇಳಿದೆ. ಅದಕ್ಕೆ ಅವರು ಒಪ್ಪಿಕೊಂಡರು. ಆದರೆ ನಂತರ ಅವರು ವಿದೇಶಕ್ಕೆ ಹೋದರು, ಸಿಇಟಿ ರಿಸಲ್ಟ್ ಸಹ ಬಂತು. ಏನೂ ಮಾಡಲಿಕ್ಕೆ ಆಗಲಿಲ್ಲ. ನಾಳೆಯಿಂದ ಅಡ್ಮಿಷನ್ ಪ್ರಾರಂಭವಾಗುತ್ತಿದೆ. ಅಡ್ಮಿಷನ್ ಆದ ನಂತರ ಏನೂ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಾಳೆ ಅಡ್ಮಿಷನ್ ಪ್ರಾರಂಭ ಮಾಡುವುದನ್ನು ತಡೆಹಿಡಿದು ನಿಲ್ಲಿಸಿ, ಸಿಇಟಿ ಎಕ್ಸಾಮ್ ಅನ್ನು ರೀಜನಲ್‌ವೈಸ್ ಮಾಡಬೇಕು ಅಥವಾ ಯುನಿವರ್ಸಿಟಿ ವೈಸ್ ಮಾಡಬೇಕು. ಮತ್ತು ಪಿಯುಸಿ ಬೋರ್ಡ್ ಕೂಡ ಬೇರೆ ಬೇರೆ ಆದರೆ ಮಾತ್ರ ಹಿಂದುಳಿದ ಪ್ರದೇಶಗಳ ವಿದ್ಯಾರ್ಥಿಗಳಿಗೆ ಅವಕಾಶ ಸಿಗುತ್ತದೆ. ಇಲ್ಲದಿದ್ದಲ್ಲಿ ಇವತ್ತು ಮೆಡಿಕಲ್‌ಗಾಗಲಿ, ಇಂಜನಿಯರಿಂಗ್‌ಗಾಗಲಿ, ಅಥವಾ ವೆಟರ್‌ನರಿ ಕಾಲೇಜುಗಳಲ್ಲಾಗಲಿ ಹಿಂದುಳಿದ ಪ್ರದೇಶದ ವಿದ್ಯಾರ್ಥಿಗಳಿಗೆ ಅವಕಾಶ ಸಿಗುವುದಿಲ್ಲ. ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಅವರೊಂದಿಗೆ ಅಲ್ಲಿನ ಒಂದು ಕಾರ್ಯಕ್ರಮಕ್ಕೆ ಹೋಗಿದ್ದೆವು. ಅಲ್ಲಿ ಬಿಲ್ಡಿಂಗ್ ಮಾತ್ರ ಇಲ್ಲಿಯದು, ಕಲಿಸುವಂತಹ ಲೆಕ್ಚರರ್ಸ್ ಕೂಡ ಹೊರಗಿನವರು. ಇದನ್ನು ನೋಡಿದ ದೇವೇಗೌಡರು ಅವರು ಭಾಷಣದಲ್ಲಿ ಇದರ ಬಗ್ಗೆ ಒಂದು ಹೊಸ ವ್ಯವಸ್ಥೆಯನ್ನು ಮಾಡುತ್ತೇನೆ ಎಂದು ಹೇಳಿದರು. ಆದರೆ ಈ ತನಕ ಆಗಿಲ್ಲ. ಇದು ಒಂದು ರೀತಿಯ ಮಲತಾಯಿ ಧೋರಣೆ ತೋರುತ್ತಿದ್ದಾರೆ. ಇದರ ಬಗ್ಗೆ ನನ್ನ ಹತ್ತಿರ ಕರಡು ವರದಿ ಇದೆ. ನಮ್ಮ ಭಾಗದ ಮತ್ತು ಹಿಂದುಳಿದ ಭಾಗದವರಿಗೆ ನೌಕರಿಯಲ್ಲಿ

ರಿಸರ್ವೇಷನ್ ಸಿಗುತ್ತಿಲ್ಲ. ನಮ್ಮ ಭಾಗದವರಿಗೆ ಮತ್ತು ಹಿಂದುಳಿದ ಭಾಗದವರಿಗೆ ಮಲತಾಯಿ ಧೋರಣೆಯನ್ನು ತೋರುತ್ತಿದ್ದಾರೆ. ಇಷ್ಟೇ ಅಲ್ಲದೆ ಹೋದ ಸರ್ಕಾರ ಆ ಭಾಗದ ಇಂಜನಿಯರ್ಸ್‌ಗಳನ್ನು ಮಾತ್ರ ತೆಗೆದುಕೊಳ್ಳಬೇಕು ಎಂದು ಒಂದು ಆರ್ಡರ್ ಹೊರಡಿಸಿತು. ನಂತರ ಗುಲ್ಬರ್ಗಾ ವಿಭಾಗದಲ್ಲಿ ನೌಕರಿ ಸಿಕ್ಕಿದೆ. ಅಲ್ಲಿ ಕೆಲಸ ನಡೆಯುತ್ತಿದೆ ಆದರೆ ದುರ್ದೈವದಿಂದ ಕಾನ್ಸ್‌ಟ್ಯೂಷನ್‌ನಲ್ಲಿ "equal opportunity for all" ಎಂದು ಏನಿದೆ, ಅದರ ವ್ಯಾಪ್ತಿಯಲ್ಲಿ ಹಿಂದಿನ ನೀರಾವರಿ ಮಂತ್ರಿಗಳು, ಡೆಪ್ಯೂಟಿ ಸಿಎಮ್ ಎಲ್ಲಾ ಸುಪ್ರೀಂ ಕೋರ್ಟ್‌ಗೆ ಕಳುಹಿಸಿದ್ದಾರೆ. ಮತ್ತೆ, ಮದ್ದೂರಿನಿಂದ ರಿಟ್ ಹಾಕಿದ್ದಾರೆ. ಆರ್ಡರ್ ಅವರೇ ಮಾಡಿ ಮತ್ತೆ ರಿಟ್ ಸಹ ಅವರೇ ಹಾಕಿದ್ದಾರೆ ಇದರಿಂದ ಈಗ ಅಲ್ಲಿ ಎಲ್ಲಾ ನೌಕರರು ಕೆಲಸ ಕಳೆದುಕೊಳ್ಳುವಂತಹ ಪರಿಸ್ಥಿತಿ ಬಂದಿದೆ. ಇದು ಸಂವಿಧಾನದಲ್ಲೂ ಕೂಡ ತಿದ್ದುಪಡಿ ಆಗಬೇಕು. ಬೇರೆ ರಾಜ್ಯಗಳಲ್ಲಿ ಈಗಾಗಲೇ ತಿದ್ದುಪಡಿ ಆಗಿದೆ. 1956ರಲ್ಲಿ ನಮ್ಮ ರಾಜ್ಯದಲ್ಲಿ ಭಾಷಾವಾರು ಪ್ರಾಂತ್ಯ ರಚನೆಯಾಯ್ತು. ನಂತರ ಮರಾಠವಾಡದವರು ಸಂವಿಧಾನದಲ್ಲಿ ತಿದ್ದುಪಡಿ ಮಾಡಿದರು, ತೆಲಂಗಾಣದವರು ತಿದ್ದುಪಡಿ ಮಾಡಿದರು. ಆದರೆ ದುರ್ದೈವ ನಮ್ಮ ಕಡೆಯಲ್ಲಿ ಆ ಕಾಲದಲ್ಲಿ ಯಾವುದೇ ಪ್ರಭಾವಿ ನಾಯಕರು ಇರದಿದ್ದ ಕಾರಣ ಇದು ಅಸಾಧ್ಯವಾಗಿದೆ. ಆ ದೃಷ್ಟಿಯಿಂದ ನಾಳೆಯಾಗತಕ್ಕ ಅಡ್ಜಿಷನ್ ಅನ್ನು ತಡೆಹಿಡಿದು ನಮ್ಮ ಬೇಡಿಕೆಗಳನ್ನು reservation for backward areas ಅದನ್ನು ಕನ್ಸಿಡರ್ ಮಾಡಿ ಅದು ಪ್ರಾರಂಭವಾಗಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಆ ಕಡೆ ವಿರೋಧ ಪಕ್ಷದ ಸಚಿವರು ಗಮನ ಸೆಳೆಯುವ ಸೂಚನೆಯನ್ನು ತಂದಿದ್ದಾರೆ. ನಂತರ ನಾನು ಉತ್ತರವನ್ನು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ರೂಲ್ಸ್ ಪ್ರಕಾರ ಅವರು ಗಮನ ಸೆಳೆಯುವ ಸೂಚನೆಯನ್ನು ಹಾಕಿದ್ದಾರೆ. ಮಧ್ಯದಲ್ಲಿ, ನೀವು ಶೂನ್ಯವೇಳೆ ಎಂದರೆ ಅದರ ಮಹತ್ವ ಏನು ಉಳಿಯುತ್ತದೆ. ಒಂದೇ ವಿಷಯದ ಬಗ್ಗೆ ಚರ್ಚೆ ಇದ್ದರೆ ಆ ವಿಷಯದಲ್ಲಿ ಬೇಕಾದರೆ ಇವರು ಕ್ಲಾರಿಫಿಕೇಶನ್ ಕೇಳಲಿ. ಇಲ್ಲ ಅಂದರೆ ನೀವು ಶೂನ್ಯವೇಳೆಯಲ್ಲಿ ಇದನ್ನು ಪ್ರಸ್ತಾಪ ಮಾಡಬೇಕು. ರೂಲ್ಸ್ ಪ್ರಕಾರ ಗಮನಸೆಳೆಯುವ ಸೂಚನೆ ಇರುವಾಗ ಇದನ್ನು ಮಧ್ಯದಲ್ಲಿ ತರಬಾರದು.

ಉಪಾಧ್ಯಕ್ಷರು : ಶೂನ್ಯ ವೇಳೆ ಮುಗಿಸಿದ ನಂತರ ತಮ್ಮನ್ನು ಕರೆಯುತ್ತೇನೆ. ಆಗ ನೀವು ಉತ್ತರ ಹೇಳಿ, ಈಗ ಖರ್ಗೆಯವರೇ ನೀವು ಕುಳಿತುಕೊಳ್ಳಿ.

ಬಿಜಾಪುರ ಜಿಲ್ಲೆಯನ್ನು ಪುನರ್ ವಿಂಗಡಣೆ ಮಾಡುವುದರಿಂದ ಆಗುವ ತೊಂದರೆ

+ ಶ್ರೀ ಬಸವನಗೌಡ ಸೋಮನಗೌಡ ಪಾಟೀಲ್ (ಬಿಜಾಪುರ) : ಸನ್ಮಾನ್ಯ ಉಪಾಧ್ಯಕ್ಷರೆ, ಆಗಸ್ಟ್ 15ರಂದು ಬಿಜಾಪುರ ಜಿಲ್ಲೆಯನ್ನು ಎರಡು ಜಿಲ್ಲೆಗಳನ್ನಾಗಿ ಪುನರ್ ವಿಂಗಡಣೆ ಮಾಡುವಂತಹ ಸಂದರ್ಭದಲ್ಲಿ ಕೃಷ್ಣ ನದಿಯ ಎಡದಂಡೆಯಲ್ಲಿರುವಂತಹ ಬಹುಶಃ ಆಲಮಟ್ಟಿ ಯೋಜನೆಯಿಂದ ಚಿಕ್ಕಪಡಸಲಗಿ ಎನ್ನುವಂತಹ ಒಂದು ಬ್ರಿಡ್ಜ್ ಮುಳುಗುವ ಹಂತದಲ್ಲಿ ಸುಮಾರು 23 ಹಳ್ಳಿಗಳು